ಶ್ರೀ ಅರವಿಂದ ಲಿಂಬಾವಳಿ: ನಾನು ಕಾರ್ಖಾನೆಗಳವರ ಜೊತೆ ಮಾತನಾಡಿ ಖಾಸಗಿಯವರಿಗೂ available ಆಗುವ ರೀತಿಯಿಂದ ಕ್ರಮ ಜರುಗಿಸುತ್ತೇವೆಂದು ಹೇಳುತ್ತೇನೆ.

ಸರ್ಕಾರಿ ಪಾಲಿಟೆಕ್ನಿಕ್ / ಇಂಜಿನಿಯರಿಂಗ್ ಕಾಲೇಜು ಸ್ಥಾಪಿಸುವ ಬಗ್ಗೆ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 7 : (47)

ಶ್ರೀ ಸುರೇಶ್ ಬಾಬು ಸಿ.ಬಿ. (ಚಿಕ್ಕನಾಯಕನಹಳ್ಳಿ)

ಅ) ಅತೀ ಹಿಂದುಳಿದ ತಾಲ್ಲೂಕುಗಳಲ್ಲಿ ಒಂದಾಗಿರುವ ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ಕೇಂದ್ರಕ್ಕೆ ಸರ್ಕಾರಿ ಪಾಲಿಟೆಕ್ನಿಕ್/ಇಂಜಿನಿಯರಿಂಗ್ ಕಾಲೇಜಿನ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಪ್ರಸಕ್ತ ಸಾಲಿನಲ್ಲಿ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರಕ್ಕೆ ಸರ್ಕಾರಿ ಪಾಲಿಟೆಕ್ನಿಕ್/ಇಂಜಿನಿಯರಿಂಗ್ ಕಾಲೇಜು ಮಂಜೂರು ಮಾಡಲಾಗುವುದೇ?

ಶ್ರೀ ಸಿ.ಟಿ. ರವಿ (ಮಾನ್ಯ ಉನ್ನತ ಶಿಕ್ಷಣ ಸಚಿವರು)

ಅ) ಬಂದಿದೆ.

ಆ) ರಾಜ್ಯದಲ್ಲಿ ಪ್ರಸ್ತುತ ತಾಂತ್ರಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಒಟ್ಟು 199 ಇಂಜಿನಿಯರಿಂಗ್ ಕಾಲೇಜುಗಳು ಹಾಗೂ 299 ಪಾಲಿಟೆಕ್ನಿಕ್‌ಗಳು ಮತ್ತು 12 ಕಿರಿಯ ತಾಂತ್ರಿಕ ಶಾಲೆಗಳಿರುತ್ತವೆ. 199 ಇಂಜಿನಿಯರಿಂಗ್ ಕಾಲೇಜುಗಳ ಪೈಕಿ 11 ಸರ್ಕಾರಿ, 03 ವಿಶ್ವವಿದ್ಯಾಲಯ ಕಾಲೇಜುಗಳು, 11 ಖಾಸಗಿ ಅನುದಾನಿತ ಹಾಗೂ 174 ಅನುದಾನರಹಿತ ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳಿರುತ್ತವೆ. ಅದೇ ರೀತಿ 299 ಪಾಲಿಟೆಕ್ನಿಕ್‌ಗಳ ಪೈಕಿ 81 ಸರ್ಕಾರಿ, 44 ಖಾಸಗಿ ಅನುದಾನಿತ ಹಾಗೂ 168 ಅನುದಾನರಹಿತ ಖಾಸಗಿ ಪಾಲಿಟೆಕ್ನಿಕ್‌ಗಳು ಹಾಗೂ 06 ಎರಡನೇ ಪಾಳಿಯ ಪಾಲಿಟೆಕ್ನಿಕ್‌ಗಳಿವೆ. ರಾಜ್ಯದಲ್ಲಿ ಹೊಸ ಇಂಜಿನಿಯರಿಂಗ್ ಹಾಗೂ

ಪಾಲಿಟೆಕ್ನಿಕ್‌ಗಳನ್ನು ವಿವಿಧ ಕಡೆ ಪ್ರಾರಂಭಿಸುವ ಕುರಿತು ಆರ್ಥಿಕ ಇಲಾಖೆಯ ಸಮಾಲೋಚನೆಯಲ್ಲಿರುತ್ತದೆ. ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿಯಲ್ಲಿ ಸರ್ಕಾರಿ ಪಾಲಿಟೆಕ್ನಿಕ್/ಇಂಜಿನಿಯರಿಂಗ್ ಕಾಲೇಜಿನ ಅವಶ್ಯಕತೆ, ವಿದ್ಯಾರ್ಥಿಗಳ ಸಂಖ್ಯೆ ಜಮೀನಿನ ಲಭ್ಯತೆ ಹಾಗೂ ಅನುದಾನದ ಲಭ್ಯತೆಯನ್ನು ಆಧರಿಸಿ ಆರ್ಥಿಕ ಇಲಾಖೆಯ ಸಮಾಲೋಚನೆಯೊಂದಿಗೆ ಕಾಲೇಜನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು.

ಶ್ರೀ ಸಿ.ಬಿ. ಸುರೇಶ್ ಬಾಬು: ಚಿಕ್ಕನಾಯಕನಹಳ್ಳಿಯಲ್ಲಿ ಯಾವುದೇ polytechnic college ಇಲ್ಲ. ಸರ್ಕಾರದ ವತಿಯಿಂದ ಏನಾದರೂ ಅಲ್ಲಿಗೆ college ಕೊಟ್ಟರೆ ಅಲ್ಲಿ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲವಾಗುತ್ತದೆ. Technical course ಗೆ ಅನುಕೂಲವಾಗುತ್ತದೆ.

ಬರಗಾಲ ಬಂದಿರುವುದರಿಂದ ರೈತರು ಯಾರೂ ಕೂಡ ತಮ್ಮ ಜಮೀನುಗಳನ್ನು ನೆಚ್ಚಿಕೊಂಡು ಜೀವನ ಮಾಡುವುದಕ್ಕೆ ಸಾಧ್ಯವಿಲ್ಲ. ಮಕ್ಕಳು ಇಂಥ Technical course ಗಳಿಗೆ join ಆಗಿ ಅವರಿಗೆ ಉದ್ಯೋಗ ಒದಗಿಸಿಕೊಳ್ಳುವ ನಿಟ್ಟಿನಲ್ಲಿ ಏನಾದರೂ ಅವಕಾಶವಾಗುವ ನಿಟ್ಟಿನಲ್ಲಿ ಸನ್ಮಾನ್ಯ ಸಚಿವರು ದಯಮಾಡಿ ಅಲ್ಲಿ ಒಂದು Polytechnic College ತೆರೆಯುವುದಕ್ಕೆ ಅವಕಾಶ ಮಾಡಿ ಕೊಡಬೇಕೆಂದು ತಮ್ಮ ಮೂಲಕ ಅವರಲ್ಲಿ ಕೇಳಬಯಸುತ್ತೇನೆ.

ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೇ, ನಮ್ಮ ಸರ್ಕಾರ ಬಂದ ಮೇಲೆ 43 ಮತ್ತೆ ಇತ್ತೀಚೆಗೆ 8 ಒಟ್ಟು 51 ಹೊಸ Polytechnic ಗಳನ್ನು ರಾಜ್ಯದಲ್ಲಿ ತೆರದಿದೆ. ಮುಂಚೆ ಇಡೀ ರಾಜ್ಯದಲ್ಲಿ ಇದ್ದಂಥ Polytechnic ಗಳ ಸಂಖ್ಯೆ 37. ಅದಕ್ಕಿಂತ ಜಾಸ್ತಿ Polytechnic ಗಳನ್ನು ನಮ್ಮ ಸರ್ಕಾರ ಬಂದ ಮೇಲೆ ತೆರದಿದೆ. ಒಂದು Polytechnic ತೆರೆಯಬೇಕಾದರೆ 16 ರಿಂದ 20 ಕೋಟಿ ರೂಪಾಯಿ Capital Expenditure ಬೇಕು. ಇದಲ್ಲದೆ Annual Expenditure 2 ರಿಂದ 3

ಕೋಟಿ ರೂಪಾಯಿಗಳು ಬೇಕು. ಈಗ ತುಮಕೂರು ಜಿಲ್ಲೆಯನ್ನು ನಾವು ಗಮನಿಸುವುದಾದರೆ, ತುಮಕೂರಿನಲ್ಲಿ ಈಗ 2 ಸರ್ಕಾರಿ Polytechnic ಗಳಿವೆ 1 ಅನುದಾನಿತ Polytechnic ಇದೆ. ಇದಲ್ಲದೆ 9 ಖಾಸಗಿ Polytechnic, ಮತ್ತೆ 2nd Shift ಗೆ ಹೋಗುವಂಥದ್ದು 2 ಖಾಸಗಿ Polytechnic, 7 Engineering College ಗಳಿವೆ. ರಾಜ್ಯದ ಸರಾಸರಿ ಸೀಟುಗಳ intake ನ್ನು ನಾವು ಗಮನಿಸಿದರೆ, ಈಗಾಗಲೇ ನಮಗೆ Engineering Collegeನಲ್ಲಿ 92,247 ಸೀಟುಗಳಲ್ಲಿ ಭರ್ತಿಯಾಗಿರುವುದು 72,621. Diploma College ನಲ್ಲಿ 89,406 ಸೀಟುಗಳಲ್ಲಿ ಭರ್ತಿಯಾಗಿರುವುದು 69,614 ಸೀಟುಗಳು ಮಾತ್ರ. ಗೌರವಾನ್ವಿತ ಸದಸ್ಯರು ಅಲ್ಲಿನ ಮಕ್ಕಳಿಗೆ ಅನುಕೂಲವಾಗುತ್ತದೆ ಎನ್ನುವ ಅಪೇಕ್ಷೆಯೊಂದಿಗೆ ಅಲ್ಲಿ college ತೆರೆಯಬೇಕೆಂದು ಹೇಳಿದ್ದಾರೆ. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಮತ್ತು ಅವರಿಗೆ ಉದ್ಯೋಗ ಅವಕಾಶ ಸಿಗುವಂಥ ಶಿಕ್ಷಣ ಕೊಡಬೇಕೆನ್ನುವ ಇಚ್ಛೆ ಸರ್ಕಾರದ್ದು ಇದೆ. ಖಂಡಿತವಾಗಿಯೂ ಅಲ್ಲಿಗೆ Local inspection Committee ಯನ್ನು ಕಳುಹಿಸಿ ಅಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ, Feeding College,, ಸ್ಥಳದ ಲಭ್ಯತೆ ಇವೆಲ್ಲವನ್ನೂ ಆಧರಿಸಿ, ಅಲ್ಲಿಗೆ ಕಾಲೇಜು ಅವಶ್ಯಕತೆ ಇದೆಯೋ ಇಲ್ಲವೋ ಎನ್ನುವಂಥ ವರದಿ ತರಿಸಿಕೊಂಡು, ಹಣಕಾಸಿನ ಇಲಾಖೆಯ ಅನುಮೋದನೆ ಪಡೆದು ಅಲ್ಲಿಗೆ ಅವಶ್ಯಕತೆ ಇದ್ದರೆ Polytechnicನ್ನು ಮಂಜೂರು ಮಾಡುವುದಕ್ಕೆ ಸರ್ಕಾರ ಬದ್ಧವಿದೆ.

ಶ್ರೀ ಸಿ.ಬಿ. ಸುರೇಶ್ ಬಾಬು : ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಕ್ಕೆ ಧನ್ಯವಾದಗಳು. ಅಲ್ಲಿ ಏನಾಗಿದೆ ಎಂದರೆ, ಪೋಷಕರು ತಮ್ಮ ಹೆಣ್ಣುಮಕ್ಕಳನ್ನು ಅಷ್ಟು ದೂರಕ್ಕೆ ಕಳುಹಿಸುವುದಕ್ಕೆ ತೊಂದರೆಯಾಗಿರುವುದರಿಂದ ಈಗ ಕಳುಹಿಸುತ್ತಿಲ್ಲ. ಅಲ್ಲಿ ಅವಕಾಶ ಮಾಡಿ ಕೊಟ್ಟರೆ ಖಂಡಿತ ಮಾನ್ಯ ಸಚಿವರಿಗೆ ತುಂಬಾ ಧನ್ಯವಾದಗಳನ್ನು ಹೇಳುತ್ತೇನೆ.